https://www.kuvempuonline.com



# ತೃತೀಯ ಬಿ.ಎ ಪದವಿ ಪರೀಕ್ಷೆ

## ಆಗಸ್ಟ್ / ಸೆಪ್ಟಂಬರ್ 2011

## ಅಂಚೆ ಮತ್ತು ತೆರಪಿನ ಶಿಕ್ಷಣ

## ಕನ್ನಡ ಐಚ್ಛಿಕ ಪತ್ರಿಕೆ – ೩

## ಛಂದಸ್ಸು ಮತ್ತು ಹಳಗನ್ನಡ ಪಠ್ಯಗಳು

## (ಪಂಪಭಾರತ ಸಂಗ್ರಹ, ವಡ್ಡಾರಾಧನೆ ಮತ್ತು ಛಂದಸ್ಸು)

*ಸಮಯ: 3 ಗಂಟೆಗಳು]* *[ಅಂಕಗಳು : 70 / 80*

### ('ಅ' ವಿಭಾಗ – ಹಳಗನ್ನಡ ಪಠ್ಯಗಳು)

**1. ಅ) ಒಂದರ ಭಾವ ಸ್ವಾರಸ್ಯವನ್ನು ಬರೆಯಿರಿ.** **07**

೧) ಮತ್ತೊಂದು ದಿವಸಂ ಪದ್ಮರಥಂಗೊಸೆದಚ್ಯುತೇಂದ್ರನಟ್ಟಿದ
ದಿವ್ಯಮಪ್ಪ ಸರ್ವರುಜಾಪಹಾರಮೆಂಬ ಹಾರಂ ಸಂತತಿಯಿಂ
ವಾಮರಥಂಗೆ ಬಂದುದಂ ವಾಮರಥಂ ಕರುಮಾಡದೇಳನೆಯ
ನೆಲೆಯೊಳ್ ತನ್ನ ಉಂದುವೋವರಿಗೆಯ ಮಡಿಕೆಯೊಳಿಟ್ಟೆಲ್ಲ
ಕಾಲಮುಂ ಗಂಧ ಪುಷ್ಪ ದೀಪ ಧೂಪಾಕ್ಷತಂಗಳಿಂದರ್ಚಿಸುತ್ತಂ

೨) ಇದಱೊಳ್ ಶ್ವೇತಾತಪತ್ರ ಸ್ಥಗಿತ ದಶ ದಿಶಾಮಂಡಲಂ ರಾಜಚಕ್ರಂ
ಮದಿದಟ್ಟೂಡಿತ್ತಡಂಗಿತ್ತಿದಱೊಳೆ ಕುರು ರಾಜಾನ್ವಯಂ ಮತ್ತತಾಪ
ಕ್ಕಿದಱಿಂದಂ ನೋಡಗುರ್ವುರ್ವಿದುದಿದುವೆ ಮಹಾಭಾರತಕ್ಕಾದಿಯಾಯ್ತು
ಬ್ಜದಳಾಕ್ಷೀ ಪೇಟಿ ಸಾಮಾನ್ಯಮೆ ಬಗೆಯೆ ಭವತ್ಕೇಶಪಾಶ ಪ್ರಪಂಚಂ

**ಆ) ಎರಡಕ್ಕೆ ಟಿಪ್ಪಣಿ ಬರೆಯಿರಿ.** **04 ಅಂಕಗಳು**

ಸೂರ್ಯಮಿತ್ರಾಚಾರ್ಯ, ಯಮದಂಡ, ಅಶ್ವತ್ಥಾಮ, ವಿಕ್ರಮಾರ್ಜುನ ವಿಜಯ.

**2. ಮೂರಕ್ಕೆ ಸಂದರ್ಭ ಸೂಚಿಸಿ. ಸ್ವಾರಸ್ಯ ಬರೆಯಿರಿ:** **09 ಅಂಕಗಳು**

೧) ನಮ್ಮನಾಳ್ವರುಮೊಳರೆ

೨) ಇದು ಪಾತಾಳ ಬಿಲಕ್ಕೆ ಬಾಗಿಲ್

೩) ಕಳ್ಳಂಗೆ ತಕ್ಕ ನಿಗ್ರಹಮಂ ನಿನಗೆ ಮಾಡಿದಪ್ಪೆನ್

೪) ಪೆಣನನಿಱಿದು ಪಗೆಗೊಂಡರ್

೫) ಕಾಳಕೂಟಮೊಗೆವಂತೊಗೆದಂ ಫಣಿರಾಜಕೇತನಂ

3. ಒಂದು ಪ್ರಶ್ನೆಗೆ ಉತ್ತರಿಸಿ. **10 ಅಂಕಗಳು**

೧) ಸುಕುಮಾರ ಸ್ವಾಮಿ ಕಥೆಯಲ್ಲಿ 'ಗಂಭೀರೆ' ಎಂಬ ಮುದುಕಿಯ ಉಪಕಥೆಯ ಸ್ವಾರಸ್ಯವನ್ನು ಬರೆಯಿರಿ.

೨) ವಿದ್ಯುಚ್ಚೋರನು ತಸ್ಕರ ವಿದ್ಯೆಯನ್ನು ಕಲಿಯಲು ನಿರ್ಮಾಣವಾದ ಸನ್ನಿವೇಶವನ್ನು ವಿವರಿಸಿ.

4. ಒಂದು ಪ್ರಶ್ನೆಗೆ ಉತ್ತರಿಸಿ. **10 ಅಂಕಗಳು**

೧) ಕರ್ಣ ಮತ್ತು ಅರ್ಜುನರ ನಡುವೆ ನಡೆದ ಕಾಳಗದ ಭೀಕರತೆಯನ್ನು ನಿರೂಪಿಸಿ.

*ಮುಂದುವರೆದಿದೆ. . . . . . . .2*

https://www.kuvempuonline.com

https://www.kuvempuonline.com

https://www.kuvempuonline.com

https://www.kuvempuonline.com



೨) ಪಂಪನು ಚಿತ್ರಿಸಿರುವ ಗದಾಯುದ್ಧದ ಪ್ರಸಂಗವನ್ನು ಸ್ಪಷ್ಟಪಡಿಸಿರಿ.

## ('ಆ' ವಿಭಾಗ – ಛಂದಸ್ಸು)

**5. ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ.** **10 x 2 = 20 ಅಂಕಗಳು**

೧) ಪ್ರಾಸವೆಂದರೇನು? ಅದರಲ್ಲಿ ಎಷ್ಟು ವಿಧ? ಆದಿಪ್ರಾಸವನ್ನು ನಿದರ್ಶನಗಳೊಡನೆ ಸ್ಪಷ್ಟಪಡಿಸಿ.

೨) ಖ್ಯಾತ ಕರ್ನಾಟಕಗಳು ಯಾವುವು? ಯಾವುದಾದರು ಎರಡು ವೃತ್ತಗಳ ಲಕ್ಷಣವನ್ನು ಸೋದಾಹರಣವಾಗಿ ಬರೆಯಿರಿ.

೩) ಪದ್ಮಗಣ, ಮುಡಿ, ಮೌನ, ಗಣಪರಿವೃತ್ತಿ – ಇವುಗಳನ್ನು ಉದಾಹರಣೆಗಳೊಂದಿಗೆ ಸ್ಪಷ್ಟಪಡಿಸಿ.

**6. ಕೆಳಗಿನ ಎರಡು ಪದ್ಯಗಳಿಗೆ ಪ್ರಸ್ತಾರ ಹಾಕಿ, ಗಣವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿ.** 5 x 2 = 10 **ಅಂಕಗಳು**

೧) ಕರ್ಣಂಗಂಡಲ್ತೆಕಲ್ತರ್ ನುಡಿವ ಪಸುಗೆಯಂಗಂಡರಾಗಂಡವಾತುಂ

೨) ಈಶನ ಕರುಣೆಯ
ನಾಶಿಸು ವಿನಯದಿ
ದಾಸನ ಹಾಗೆಯೇ ನೀ ಮನವೇ

೩) ಓರೆ ಗಣ್ಣಿನೊಂದು ಹೊರಳು
ಹೋಗ ಬೇಡಿರೆಂದಿತು.

7. **ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ: (80 ಅಂಕಗಳ ಸ್ಕೀಮ್‌ನವರಿಗಾಗಿ ಕಡ್ಡಾಯ ಪ್ರಶ್ನೆ)** 10 ಅಂಕಗಳು

1) ಕರ್ಣನ ವ್ಯಕ್ತಿತ್ವವನ್ನು ಪಂಪಭಾರತದ ಹಿನ್ನೆಲೆಯಲ್ಲಿ ವಿವರಿಸಿ.

**ಅಥವಾ**

2) ದುರ್ಯೋಧನನ ವಿಲಾಪ ಕುರಿತು ಬರೆಯಿರಿ.

* * * * * *

78

https://www.kuvempuonline.com
https://www.kuvempuonline.com
https://www.kuvempuonline.com